# ಆಯುಕ್ತರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ,

**ರೊದ್ದ ರಸ್ತೆ, ಧಾರವಾಡ-580 008**

ಸಂಖ್ಯೆ:ಪಿ2/ಶಾ.ಪ್ರಾ.ಕಾ./15/2017-18 ದಿನಾಂಕ: 6 /05/2017

" ಸುತ್ತೋಲೆ"

ವಿಷಯ: 2017-18 ನೇ ಸಾಲಿನ ಶಾಲಾ ಪ್ರಾರಂಭೋತ್ಸವ ಮತ್ತು ಶಾಲಾ ಸಂದರ್ಶನ ಕಾರ್ಯಕ್ರಮ ಆಯೋಜಿಸುವ ಕುರಿತು.

** ** **

2017-18 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಮತ್ತು ಶೈಕ್ಷಣಿಕ ವರ್ಷದ ಪ್ರಾರಂಭ ಹಂತ ಮತ್ತು ನಂತರದಲ್ಲಿ ಶಾಲಾ ಹಂತದಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿದೆ.

➢ **ಶಾಲಾ ಪ್ರಾರಂಭೋತ್ಸವ ಪೂರ್ವ ಸಿದ್ಧತಾ ಹಂತ :**

ದಿನಾಂಕ: 26, 27 ಮೇ 2017 ರಂದು ಶಾಲಾ ಮುಖ್ಯಸ್ಥರು ಶಾಲಾ ಪ್ರಾರಂಭೋತ್ಸವ ಕುರಿತು ಸಿದ್ಧತೆ ಮಾಡಿಕೊಳ್ಳಬೇಕಾದ ವಿವರ :

1) ಎಸ್.ಡಿ.ಎಂ.ಸಿ ಸಭೆ ನಡೆಸುವುದು.
2) ಪ್ರಾರಂಭೋತ್ಸವ ಬಗ್ಗೆ ಗ್ರಾಮದ ವ್ಯಾಪ್ತಿಯ ಜನಪ್ರತಿನಿಧಿಗಳಿಗೆ ಮತ್ತು ಎಸ್.ಡಿ.ಎಂ.ಸಿ ಸದಸ್ಯರುಗಳಿಗೆ ತಿಳುವಳಿಕೆ ಪತ್ರ ನೀಡುವುದು.
3) ಶಾಲಾ ಪ್ರಾರಂಭೋತ್ಸವ ಬಗ್ಗೆ ಸಂಬಂಧಪಟ್ಟ ಗ್ರಾಮ ಪಂಚಾಯತಿಗೆ ಲಿಖಿತ ಕಾರ್ಯಕ್ರಮದ ವಿವರ ನೀಡುವುದು.
4) ಗ್ರಾಮದಲ್ಲಿ ಶಾಲಾ ಪ್ರಾರಂಭೋತ್ಸವ ಮುನ್ನಾ ದಿವಸ 'ಡಂಗುರ' ಸಾರುವ ಮೂಲಕ ಜಾಗೃತಿ ಮೂಡಿಸುವುದು.
5) ವರ್ಗವಾರು ಪಠ್ಯಪುಸ್ತಕ ಸಮವಸ್ತ್ರ ಹಂಚಿಕೆ ಕುರಿತು ವರ್ಗೀಕರಿಸಿಕೊಳ್ಳುವುದು.
6) ಶಾಲಾ ವರ್ಗದ ಬೋಧನಾ ಕೊಠಡಿಗಳು ಮತ್ತು ಹೊರಾಂಗಣ ಶುಚಿತ್ವಗೊಳಿಸುವುದು.
7) ಶಾಲಾ ಹೊರಾಂಗಣದಲ್ಲಿ ತಳಿರು ತೋರಣಗಳಿಂದ ಶೃಂಗರಿಸುವುದು ಮತ್ತು ಗ್ರಾಮದ ಸ್ಥಳೀಯ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ಹಬ್ಬಗಳಂತೆ ಕಂಗೊಳಿಸುವಂತಿರಬೇಕು.
8) ಕಾರ್ಯಕ್ರಮ ದಿನದಂದು ಚರ್ಚಿಸಿ ನಿರ್ಣಯಿಸಬೇಕಾದ ವಿಷಯಗಳ ಕುರಿತು ಸಿದ್ಧತೆ ಮತ್ತು ದಾಖಲೀಕರಣ ಸಿದ್ಧತೆ ಮಾಡಿಕೊಳ್ಳುವುದು.

➢ **ಶಾಲಾ ಪ್ರಾರಂಭೋತ್ಸವ ದಿನದಂದು ಪರಿಶೀಲಿಸಬೇಕಾದ ಅಂಶಗಳು :**

I. ಪ್ರಾರಂಭೋತ್ಸವ ದಿನಾಂಕ: 29-05-2017

II. ಸಮಯ : ಬೆಳಿಗ್ಗೆ 10:00 ರಿಂದ ಸಾಯಂಕಾಲ 5:00 ಗಂಟೆ

III. ಶಾಲಾ ಹಂತದಲ್ಲಿ ಪರಿಶೀಲಿಸಬೇಕಾದ ಅಂಶಗಳು :

- ಶಾಲಾ ಒಳಾಂಗಣ ಹಾಗೂ ಹೊರಾಂಗಣದ ಶುಚಿತ್ವ
- ಶೌಚಾಲಯ ಸ್ವಚ್ಛತೆ ಹಾಗೂ ನೀರು ಪೂರೈಕೆ
- ಕುಡಿಯುವ ನೀರಿನ ವ್ಯವಸ್ಥೆ
- ವರ್ಗ ಬೋಧನಾ ಕೋಣೆಗಳ ಸಿದ್ಧತೆ/ಪರಿಶೀಲನೆ
- ಮಧ್ಯಾಹ್ನ ಉಪಹಾರ ಯೋಜನೆ (ಅಕ್ಷರ ದಾಸೋಹ ಕಾರ್ಯಕ್ರಮ)
- ಕ್ಷೀರ ಭಾಗ್ಯ ಕಾರ್ಯಕ್ರಮ
- ಸಮವಸ್ತ್ರ/ಪಠ್ಯಪುಸ್ತಕ ವರ್ಗವಾರು ಹಂಚಿಕೆ ವಿವರ ಪರಿಶೀಲನೆ

❖ ವರ್ಗವಾರು ಮಕ್ಕಳ ದಾಖಲಾತಿ/ಹಾಜರಾತಿಯ ವಿವರ

❖ ಶಿಕ್ಷಕರ ಹಾಜರಾತಿ ಪರಿಶೀಲಿಸುವುದು.

➢ **ಶಾಲಾ ಪ್ರಾರಂಭದ ದಿನ ಸಿದ್ದತೆ:**

1. ಎಸ್.ಡಿ.ಎಂ.ಸಿ ಎಲ್ಲ ಸದಸ್ಯರಿಗೆ ತಿಳುವಳಿಕೆ ಪತ್ರ ನೀಡುವುದು. ಮತ್ತು ಸದರಿ ಶಾಲಾ ವ್ಯಾಪ್ತಿಯ ಎಲ್ಲ ಜನಪ್ರತಿನಿಧಿಗಳನ್ನು ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸುವುದು.
2. ಶಾಲಾ ಒಳಾಂಗಣ ಮತ್ತು ಹೊರಾಂಗಣವನ್ನು ಶುಚಿತ್ವಗೊಳಿಸಿ ತಳಿರು ತೋರಣಗಳಿಂದ ಶೃಂಗರಿಸುವುದು.
3. ಶಾಲಾ ಶೈಕ್ಷಣಿಕ ಅಂದರೆ ಪಠ್ಯ, ಪಠ್ಯೇತರ ಚಟುವಟಿಕೆಗಳು ಮತ್ತು ವರ್ಷದುದ್ದಕ್ಕೂ ಶಾಲಾ ಹಂತದಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ತಿಂಗಳುವಾರು ಕ್ರಿಯಾಯೋಜನೆ/ಕ್ಯಾಲೆಂಡರ್ ಸಿದ್ದಪಡಿಸುವುದು.
4. ಶಾಲಾ ಪ್ರಾರಂಭ ದಿನದಂದು ವರ್ಗವಾರು ಹಾಜರಿದ್ದ ಎಲ್ಲ ಮಕ್ಕಳಿಗೆ ಪಠ್ಯಪುಸ್ತಕ , ಸಮವಸ್ತ್ರ ಹಂಚಿಕೆಗೆ ಕ್ರಮವಹಿಸುವುದು.
5. ವರ್ಗವಾರು ವೇಳಾಪತ್ರಿಕೆ ಮಕ್ಕಳಿಗೆ ಬರೆಸುವುದು. ಪ್ರತಿ ಕೊಠಡಿಯಲ್ಲಿ ಶಾಲಾ ವೇಳಾಪತ್ರಿಕೆಯನ್ನು ವರ್ಗದ ಗೋಡೆಗೆ ಅಂಟಿಸುವುದು.
6. ಶಿಕ್ಷಕರಿಗೆ ವರ್ಗ ಹಂಚಿಕೆ ಮತ್ತು ವಿಷಯ ಹಂಚಿಕೆ ಮಾಡಿ ವಹಿಯಲ್ಲಿ ನಮೂದಿಸಿ ಕ್ರಮವಹಿಸುವುದು.
7. **ಜೂನ 05** ರಂದು " **ವಿಶ್ವ ಪರಿಸರ ದಿನಾಚರಣೆ** " ಕಾರ್ಯಕ್ರಮವನ್ನು ಕಡ್ಡಾಯವಾಗಿ ಶಾಲಾ ಹಂತದಲ್ಲಿ ವಿಜೃಂಭಣೆಯಿಂದ ಆಚರಿಸುವುದು. ಪರಿಸರ ಕುರಿತು ಮಕ್ಕಳು ಹಾಗೂ ಸಮುದಾಯದಲ್ಲಿ ಪರಿಸರ ಪ್ರಜ್ಞೆಯ ಪರಿಕಲ್ಪನೆಗಳ ಕುರಿತು ಜಾಗೃತಿ ಮೂಡಿಸುವುದು.
8. ಶಾಲಾ ಪ್ರಾರಂಭೋತ್ಸವ ಕುರಿತು ಪೂರ್ವಭಾವಿ ಸಿದ್ದತೆ ಮತ್ತು ಸದರಿ ದಿನದಂದು ಇರುವ ಕಾರ್ಯಕ್ರಮ ಮತ್ತು ನಂತರದಲ್ಲಿ ವರದಿ ಸಿದ್ದಪಡಿಸಿ ಸಿ.ಆರ್.ಸಿ ಮೂಲಕ ಬಿ.ಆರ್.ಸಿ ಹಂತದಲ್ಲಿ ಬ್ಲಾಕ್ ಹಂತದಲ್ಲಿ ಕ್ರೋಢೀಕರಣದ ವರದಿಯನ್ನು ಉಪನಿರ್ದೇಶಕರು ಆಡಳಿತ ಮತ್ತು ಅಭಿವೃದ್ಧಿ ರವರಿಗೆ ಸಲ್ಲಿಸುವುದು. ತದನಂತರದಲ್ಲಿ ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು ಜಿಲ್ಲಾ ಕ್ರೋಢೀಕರಣದ ಅನುಷ್ಠಾನದ ವರದಿಯನ್ನು ಆಯುಕ್ತಾಲಯಕ್ಕೆ ಸಲ್ಲಿಸುವುದು.

➢ **ಶಾಲಾ ಭೇಟಿ ಹಂತದ ಪರಿಶೀಲನೆ (ಶೈಕ್ಷಣಿಕ) :**

a) ಸೇತುಬಂಧ ಸಿದ್ದತೆ

b) ವಾರ್ಷಿಕ ಅಂದಾಜು ಪತ್ರಿಕೆ

c) ಶಾಲಾ ಸಂಯುಕ್ತ ವೇಳಾ ಪತ್ರಿಕೆ

d) ಶಿಕ್ಷಕರ ಬೋಧನಾ ವೇಳಾಪತ್ರಿಕೆ

e) ಪಾಠ ಟಿಪ್ಪಣಿ ಮತ್ತು ಪಾಠೋಪಕರಣಗಳು

f) ಶಿಕ್ಷಕರ ಬೋಧನಾ ಪ್ರಕ್ರಿಯೆ ಪೂರ್ವ ಸಿದ್ದತೆ

g) ಶಾಲಾ ಭೇಟಿ /ಸಂದರ್ಶನವನ್ನು ಆಯಾ ತಾಲ್ಲೂಕಿನ ಸಿ.ಆರ್.ಪಿ/ಬಿ.ಆರ್.ಪಿ/ಈ.ಸಿ.ಓ/ಬಿ.ಆರ್.ಸಿ/ಬಿ.ಇ.ಓ ರವರಿಗೆ ಕ್ಲಸ್ಟರ್ ವ್ಯಾಪ್ತಿಯ ಶಾಲೆಗಳನ್ನು ಹಂಚಿಕೆ ಮಾಡುವುದು. ಈ ಹಂಚಿಕೆ ಮಾಡಿದ ಶಾಲೆಗಳಿಗೆ ನಿಗಧಿತ ಅವಧಿಯೊಳಗೆ ಭೇಟಿ ಮಾಡಿ ಶಾಲಾ ಹಂತದಲ್ಲಿ ಇದ್ದ ಸ್ಥಿತಿಯನ್ನು ಅವಲೋಕಿಸಿ ಲಿಖಿತ ವಿವರ ದಾಖಲಿಸುವುದು.

h) ಶಾಲಾ ಭೇಟಿಯನ್ನು ದಿನಾಂಕ: 29/05/2017 ರಿಂದ 17/06/2017 ರವರೆಗೆ ನಿರಂತರವಾಗಿ ನಡೆಸುವುದು. ಉಪನಿರ್ದೇಶಕರ ಕಛೇರಿಯ ಶಿಕ್ಷಣಾಧಿಕಾರಿಗಳು/ವಿಷಯ ಪರಿವೀಕ್ಷಕರು ಸಹ ಅವರಿಗೆ ವಹಿಸಲಾದ ನೋಡಲ್ ತಾಲ್ಲೂಕಿನಲ್ಲಿನ ಶಾಲೆಗಳಿಗೆ ಸಂದರ್ಶನ/ಭೇಟಿ ನೀಡಲು ಕ್ರಿಯಾ ಯೋಜನೆ ಸಿದ್ದಪಡಿಸುವುದು.

➢ **ಸೇತುಬಂಧ ಕಾರ್ಯಕ್ರಮ :**

❖ **ಪೂರ್ವ ಪರೀಕ್ಷೆ (Pre-Test) :**

a) ಜೂನ್ ಮೊದಲ ವಾರದಲ್ಲಿ ಎಲ್ಲ ವರ್ಗದ ಮಕ್ಕಳಿಗೆ ಅಂದರೆ 2 ರಿಂದ 10ನೇ ತರಗತಿಗಳಿಗೆ (ವಿಷಯವಾರು) ಪೂರ್ವಭಾವಿ ಪರೀಕ್ಷೆಯನ್ನು ತೆಗೆದುಕೊಳ್ಳುವುದು. ಈ ಪೂರ್ವಭಾವಿ ಪರೀಕ್ಷೆಯ ಗರಿಷ್ಠ 100 ಅಂಕಗಳಿಗೆ ಪ್ರಶ್ನೆಪತ್ರಿಕೆ ತಯಾರಿಸುವುದು.

b) ಪೂರ್ವಭಾವಿ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವುದು, ಉತ್ತರ ಪತ್ರಿಕೆಗಳನ್ನು ವಿಷಯವಾರು ಸಂಬಂಧಿಸಿದ ಶಿಕ್ಷಕರು ವಿಶ್ಲೇಷಣೆ ಮಾಡುವುದು ಮತ್ತು ಫಲಿತಾಂಶ ಪಟ್ಟಿ ಸಿದ್ಧಪಡಿಸುವುದು.

c) ಪೂರ್ವಭಾವಿ ಪರೀಕ್ಷೆಯ ಫಲಿತಾಂಶ ವಿಶ್ಲೇಷಣಾ ಪಟ್ಟಿ ಆಧಾರ ವಿದ್ಯಾರ್ಥಿಗಳ ಕಲಿಕಾ ಹಂತ ವಿಷಯವಾರು ಗುರ್ತಿಸುವುದು ಮತ್ತು ಕಲಿಕಾ ನ್ಯೂನ್ಯತೆಗಳನ್ನು ಆಯಾ ವಿಷಯದಲ್ಲಿರುವ ಸಾಮರ್ಥ್ಯಗಳನ್ನು ಗುರುತಿಸಿ ಪಟ್ಟಿ ಮಾಡುವುದು.

❖ **ಪರಿಹಾರ ಬೋಧನೆ (Remedial Teaching) :**

ಈ ಕಾರ್ಯವನ್ನು ಜೂನ 2 ನೇ ವಾರದಿಂದ ಪ್ರಾರಂಭಿಸಿ ಜೂನ 30ರವರೆಗೆ ನಡೆಸುವುದು.

❖ **ಸಾಫಲ್ಯ ಪರೀಕ್ಷೆ (Post-Test) :**

a) ಸಾಫಲ್ಯ ಪರೀಕ್ಷೆಗಳನ್ನು 2 ರಿಂದ 10ನೇ ತರಗತಿವರೆಗಿನ ಎಲ್ಲಾ ಮಕ್ಕಳಿಗೆ ವಿಷಯವಾರು ನಡೆಸುವುದು. ನಂತರ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ವಿಶ್ಲೇಷಣಾ ಪಟ್ಟಿ ಸಿದ್ಧಪಡಿಸಿ ಸದರ ಫಲಿತಾಂಶವನ್ನು ಪೂರ್ವ ಪರೀಕ್ಷೆಯ ಉತ್ತರ ಪತ್ರಿಕೆಗಳ ಫಲಿತಾಂಶ ಪಟ್ಟಿಯೊಂದಿಗೆ ಹೋಲಿಕೆ/ತಾಳೆ ಮಾಡಿ ವಿಷಯವಾರು ವಿದ್ಯಾರ್ಥಿಗಳ ಕಲಿಕಾ ಏರಿಳಿತ ಹಂತವನ್ನು ಗುರುತಿಸುವುದು ಮತ್ತು ಪೂರ್ವ ಪರೀಕ್ಷೆ ಮತ್ತು ಸಾಫಲ್ಯ ಪರೀಕ್ಷೆ ಆಧಾರ ವಿದ್ಯಾರ್ಥಿಗಳ ಕಲಿಕಾ ಸಾಧನಾ ಹಂತವನ್ನು ಅವಲೋಕಿಸಿ ಇನ್ನು ವಿಷಯವಾರು ಕಲಿಕಾ ನ್ಯೂನ್ಯತೆ/ದೋಷಗಳ ಪಟ್ಟಿ ಸಿದ್ಧಪಡಿಸಿ ವಿದ್ಯಾರ್ಥಿಗಳಿಗೆ ನಿರಂತರ ಪರಿಹಾರ ಬೋಧನೆ ತರಗತಿಗಳನ್ನು ನಡೆಸುವುದು.

b) ಜುಲೈ ಮೊದಲ ವಾರದಿಂದ ಈ ಶೈಕ್ಷಣಿಕ ವರ್ಷದಲ್ಲಿ ಆಯಾ ವರ್ಗಕ್ಕೆ ನಿಗದಿಪಡಿಸಿದ ಪಠ್ಯಪುಸ್ತಕದಲ್ಲಿರುವ ವಿಷಯವನ್ನು ಬೋಧನೆ ಮಾಡುವ ಸಂದರ್ಭದಲ್ಲಿ ಕಲಿಕಾ ದೋಷ/ ನ್ಯೂನ್ಯತೆಗಳನ್ನು ನಿರಂತರವಾಗಿ ಶಾಲಾ ಅವಧಿ ಪೂರ್ವ ಮತ್ತು ನಂತರದಲ್ಲಿ ಮಕ್ಕಳ ಕಲಿಕಾ ಗುಣಮಟ್ಟ ಸುಧಾರಣೆಗೆ ಅಗತ್ಯ ಕ್ರಮಕೈಗೊಳ್ಳುವಂತೆ ಕ್ರಮವಹಿಸುವುದು.

❖ **ಶಾಲಾ ಪ್ರಾರಂಭೋತ್ಸವಕ್ಕೆ ತಗಲುವ ವೆಚ್ಚ :**

ಶಾಲಾ ಸಂಚಿತ ನಿಧಿಯಿಂದ ಈ ಕಾರ್ಯಕ್ರಮ ಸಂಬಂಧ ರೂ.2,000/-ಗಳನ್ನು [ಎರಡು ಸಾವಿರ ರೂ.ಗಳು ಮಾತ್ರ] ಶಾಲಾ ಸ್ವಚ್ಚತೆ/ಶುಚಿತ್ವ ಮತ್ತು ಇತರೆ ಕೆಲಸಗಳಿಗೆ ನಿಯಮಾನುಸಾರ ಬಳಸಿಕೊಳ್ಳುವದು.

❖ **ಸಿ.ಟಿ.ಇ/ಡಯಟ್ ಪಾತ್ರ :**

ಸಿ.ಟಿ.ಇ/ಡಯಟ್ ಹಂತದ ಅಧಿಕಾರಿಗಳು (ಪ್ರಾಂಶುಪಾಲರು/ರೀಡರ್/ಹಿರಿಯ ಉಪನ್ಯಾಸಕರು/ ಉಪನ್ಯಾಸಕರು) ಸಂಬಂಧಪಟ್ಟ ಜಿಲ್ಲೆ ವ್ಯಾಪ್ತಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ನಿಗಧಿಗೊಳಿಸಿದ ಅವಧಿಯಲ್ಲಿ ನಿರಂತರವಾಗಿ ಸಂಬಂಧಿಸಿದ ನೋಡಲ್ ವ್ಯಾಪ್ತಿಯಲ್ಲಿನ ಶಾಲೆಗಳಿಗೆ ಭೇಟಿ ನೀಡಿ ವರದಿ ದಾಖಲೀಕರಣ ಮಾಡುವುದು. ಸದರಿ ವರದಿಯನ್ನು ಸಂಬಂಧಿಸಿದ ಜಿಲ್ಲೆಯ ಉಪನಿರ್ದೇಶಕರಿಗೆ ಕಳುಹಿಸುವ ವ್ಯವಸ್ಥೆ ಮಾಡುವುದು.

➢ **ದಾಖಲಾತಿ/ಹಾಜರಾತಿ ಪ್ರಕ್ರಿಯೆ:**

ಶಾಲಾ ಹಂತದಲ್ಲಿ ಮುಖ್ಯ ಶಿಕ್ಷಕರು ದಾಖಲಾತಿ ನಿಯಮದಡಿ ಹೊಸ ವರ್ಗಗಳಿಗೆ ದಾಖಲಾತಿ ಪ್ರವೇಶ ಪ್ರಕ್ರಿಯೆಯನ್ನು ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆಯನ್ವಯ (ಆರ್.ಟಿ.ಈ) ಅಗತ್ಯ ಕ್ರಮ ವಹಿಸುವುದು. ಶಾಲಾ ಸಂದರ್ಶನ ನಮೂನೆ ಪ್ರತಿ ಲಗತ್ತಿಸಿದೆ.

ಈ ಮೇಲಿನ ಎಲ್ಲ ಅಂಶಗಳಿಗೆ ಆಯಾ ದಿನದ ಕ್ರೋಢೀಕೃತ ವರದಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಂಬಂಧಿಸಿದ ಜಿಲ್ಲೆಯ ಉಪನಿದೇಶಕರಿಗೆ ಈ ಕಾರ್ಯ ಮುಗಿದ ತರುವಾಯ ದಿನಾಂಕ:30/06/2017 ರ ಒಳಗಾಗಿ ಸಲ್ಲಿಸುವುದು. ತದನಂತರದಲ್ಲಿ ಸಂಬಂಧಪಟ್ಟ ಜಿಲ್ಲೆಯ ಉಪನಿರ್ದೇಶಕರು ಆಯುಕ್ತಾಲಯಕ್ಕೆ ದಿನಾಂಕ: 07/07/2017ರೊಳಗಾಗಿ ಜಿಲ್ಲೆಯ ಸಮಗ್ರ ಕ್ರೋಢೀಕೃತ ವರದಿಯನ್ನು ಕಳುಹಿಸುವುದು.

ಈ ಕಾರ್ಯಕ್ರಮ ಬಗ್ಗೆ ಸಂಬಂಧಿಸಿದ ಜಿಲ್ಲೆಗಳ ಉಪನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿಲ್ಲೆ ಮತ್ತು ಬ್ಲಾಕ್ ವ್ಯಾಪ್ತಿಯ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಸದರಿ ಸುತ್ತೋಲೆ ಛಾಯಾಪ್ರತಿ ನಿಗಧಿತ ಅವಧಿಯೊಳಗೆ ತಲುಪಿಸಲು ಅಗತ್ಯ ಕ್ರಮವಹಿಸಲು ತಿಳಿಸಿದೆ.

[ವೀರಣ್ಣ ಜಿ. ತುರಮರಿ]
ಅಪರ ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ,
ಧಾರವಾಡ.

ಇವರಿಗೆ ಸೂಕ್ತ ಕ್ರಮಕ್ಕಾಗಿ :

1. ಪ್ರಾಂಶುಪಾಲರು, ಸಿ.ಟಿ.ಇ, ಬೆಳಗಾವಿ/ಜಮಖಂಡಿ, ಜಿ: ಬಾಗಲಕೋಟ
2. ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಳಗಾವಿ
3. ವಿಭಾಗದ ಎಲ್ಲ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ,
4. ವಿಭಾಗದ ಎಲ್ಲ ಉಪನಿರ್ದೇಶಕರು (ಅಭಿವೃದ್ಧಿ), ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಸಾರ್ವಜನಿಕ ಶಿಕ್ಷಣ ಇಲಾಖೆ,
5. ವಿಭಾಗದ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ,

ಪ್ರತಿ ಗೌರವಪೂರ್ವಕ ಮಾಹಿತಿಗಾಗಿ:
ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು-560 001.

ಪ್ರತಿ ಮಾಹಿತಿಗಾಗಿ:
ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೆ.ಆರ್. ವೃತ್ತ, ನೃಪತುಂಗ ರಸ್ತೆ, ಬೆಂಗಳೂರು-560 001.

ನಮೂನೆ

## ಶಾಲಾ ಪ್ರಾರಂಭೋತ್ಸವ ಸಂದರ್ಶನ ವರದಿ

- ❖ ಶಾಲೆ ಹೆಸರು : ಸಂದರ್ಶನ ದಿನಾಂಕ :
- ❖ ಶಾಲಾ ಮುಖ್ಯಸ್ಥರ ಹೆಸರು :
- ❖ ಮಂಜೂರಾದ ಶಿಕ್ಷಕರು & ಬೋಧಕೇತರ ಹುದ್ದೆಗಳ ಸಂಖ್ಯೆ:
- ❖ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು & ಬೋಧಕೇತರ ಹುದ್ದೆಗಳ ಸಂಖ್ಯೆ:
- ❖ ಸಂದರ್ಶನ ಅಧಿಕಾರಿ/ಸಿಬ್ಬಂದಿ ಹೆಸರು & ಪದನಾಮ:
- ❖ ಮಕ್ಕಳ ದಾಖಲಾತಿ-ಹಾಜರಾತಿ ವಿವರ :

| | 1ನೇ ವರ್ಗ | | | 2ನೇ ವರ್ಗ | | | 3ನೇ ವರ್ಗ | | | 4ನೇ ವರ್ಗ | | | 5ನೇ ವರ್ಗ | | | 6ನೇ ವರ್ಗ | | | 7ನೇ ವರ್ಗ | | | 8ನೇ ವರ್ಗ | | | 09ನೇ ವರ್ಗ | | | 10ನೇ ವರ್ಗ | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| ವಿವರ | ಗಂ | ಹೆ | ಒ | ಗಂ | ಹೆ | ಒ | ಗಂ | ಹೆ | ಒ | ಗಂ | ಹೆ | ಒ | ಗಂ | ಹೆ | ಒ | ಗಂ | ಹೆ | ಒ | ಗಂ | ಹೆ | ಒ | ಗಂ | ಹೆ | ಒ | ಗಂ | ಹೆ | ಒ | ಗಂ | ಹೆ | ಒ |
| ದಾಖಲಾತಿ | | | | | | | | | | | | | | | | | | | | | | | | | | | | | | |
| ಹಾಜರಾತಿ | | | | | | | | | | | | | | | | | | | | | | | | | | | | | | |

1) 01 ರಿಂದ 05 ನೇ ತರಗತಿ ಒಟ್ಟು ಮಕ್ಕಳ ಸಂಖ್ಯೆ:
2) 01 ರಿಂದ 07 ನೇ ತರಗತಿ ಒಟ್ಟು ಮಕ್ಕಳ ಸಂಖ್ಯೆ:
3) 01 ರಿಂದ 08 ನೇ ತರಗತಿ ಒಟ್ಟು ಮಕ್ಕಳ ಸಂಖ್ಯೆ:
4) 08 ರಿಂದ 10 ನೇ ತರಗತಿ ಒಟ್ಟು ಮಕ್ಕಳ ಸಂಖ್ಯೆ:

❖ ಶಾಲಾ ಪ್ರಾರಂಭೋತ್ಸವ ಪೂರ್ವ ಸಿದ್ಧತಾ ಹಂತ: (✓) ಸಂಕೇತದಿಂದ ಗುರ್ತಿಸುವುದು.

| ಸಮಾಧಾನಕರ | ತೃಪ್ತಿಕರ | ಉತ್ತಮ/ಅಸಾಧಾರಣ |
|---|---|---|
| | | |

❖ ಶಾಲಾ ಪ್ರಾರಂಭಿಸುವ ದಿನದಂದು ಅನುಷ್ಠಾನ ಕಾರ್ಯಕ್ರಮ: (✓) ಸಂಕೇತದಿಂದ ಗುರ್ತಿಸುವುದು.

| ಸಮಾಧಾನಕರ | ತೃಪ್ತಿಕರ | ಉತ್ತಮ/ಅಸಾಧಾರಣ |
|---|---|---|
| | | |

❖ ಶಾಲಾ ಪ್ರಾರಂಭ ದಿನ ಸಿದ್ಧತೆ: (✓) ಸಂಕೇತದಿಂದ ಗುರ್ತಿಸುವುದು.

| ಸಮಾಧಾನಕರ | ತೃಪ್ತಿಕರ | ಉತ್ತಮ/ಅಸಾಧಾರಣ |
|---|---|---|
| | | |

❖ ಶಾಲಾ ಭೇಟಿ ಹಂತದ ಪರಿಶೀಲನೆ: (✓) ಸಂಕೇತದಿಂದ ಗುರ್ತಿಸುವುದು.

| ಸಮಾಧಾನಕರ | ತೃಪ್ತಿಕರ | ಉತ್ತಮ/ಅಸಾಧಾರಣ |
|---|---|---|
| | | |

❖ ಸೇತುಬಂಧ ಕಾರ್ಯಕ್ರಮ:

- ಪೂರ್ವ ಪರೀಕ್ಷೆ : ಅನುಷ್ಠಾನ (ವರ್ಗವಾರು)

| ಪ್ರಶ್ನೆಪತ್ರಿಕೆ | | ಷರಾ |
|---|---|---|
| ತಯಾರಿಸಲಾಗಿದೆ | ತಯಾರಿಸಲಾಗಿಲ್ಲ | |
| | | |

❖ ಸಮವಸ್ತ್ರ/ಪಠ್ಯಪುಸ್ತಕ ಹಂಚಿಕೆ

ಎ) ಪಠ್ಯಪುಸ್ತಕ:

| ಎಲ್ಲಾ ವರ್ಗಗಳು ಸೇರಿ ಸ್ವೀಕೃತಿಯಾದ ಒಟ್ಟು ಪುಸ್ತಕಗಳ ಸಂಖ್ಯೆ: | ಪೂರೈಕೆಯಾಗದೇ ಇರುವ ಪಠ್ಯಪುಸ್ತಕಗಳ ಸಂಖ್ಯೆ: ವರ್ಗವಾರು/ವಿಷಯವಾರು ವಿವರಣೆ |
|---|---|
| | |

❖ ಬಿ) ಸಮವಸ್ತ್ರ:

| ಎಲ್ಲಾ ವರ್ಗಗಳು ಸೇರಿ ಸ್ವೀಕೃತಿಯಾದ ಒಟ್ಟು ಸಮವಸ್ತ್ರಗಳ ಸಂಖ್ಯೆ: | ಪೂರೈಕೆಯಾಗದೇ ಇರುವ ಸಮವಸ್ತ್ರಗಳ ಸಂಖ್ಯೆ: ವರ್ಗವಾರು ವಿವರಣೆ |
|---|---|
| | |

❖ ಪರಿಹಾರ ಬೋಧನೆ ಸಿದ್ಧತೆ: ವಿವರಣೆ–

❖ ಸಾಫಲ್ಯ ಪರೀಕ್ಷೆ ಕುರಿತು ಸಿದ್ಧತಾ ವಿವರ:

ಈ ಮೇಲ್ಕಂಡ ನಮೂನೆಯ ವಿವರ ಶಾಲಾ ಭೇಟಿ ದಿನದಂದು ಶಾಲಾ ಹಂತದಲ್ಲಿ ಪರಿಶೀಲಿಸಿ ನಮೂದಿಸಿ ದಾಖಲೀಕರಣದ ಅಂಶಗಳು ಸರಿ ಎಂದು ದೃಢೀಕರಿಸಿದೆ.

ಶಾಲಾ ಮುಖ್ಯಸ್ಥರ ಹೆಸರು/ಪದನಾಮ

ಸಂದರ್ಶಕರ ಹೆಸರು/ಪದನಾಮ